*ಹೆಚ್.ಆರ್.ಕಡಿವಾಲ, ಬಾದಾಮಿ*
*ಇಂದು ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ; ಏಕೆ?*




ಗುಣ ಮುಟ್ಟದ ಶಿಕ್ಷಕರಿರುವುದರಿಂದ!

*ಮಹೇಶ್ ಹೆಗಡೆ, ಹೆಗ್ಲೆ*
*ಕಳ್ಳರ ಕೈಗೆ ಕೀ ಕೊಡುವುದಕ್ಕಿಂತಲೂ, ಭೂಗಳ್ಳರ ಕೈಗೆ ಅಧಿಕಾರ ಕೊಡುವುದು ಅಪಾಯಕಾರಿಯಲ್ಲವೇ?*
ಹಣ, ಹೆಂಡ ಆರಿಸಿದ ಖರ್ಚಿಯಿಂದ ಚೌರ್ಯವಲ್ಲದೆ ಕಾರ್ಯ ನಿರೀಕ್ಷಿಸಲಾಗದಲ್ಲ!

*ಎಂ.ಎಸ್.ಗುರುರಾಜಾಚಾರು, ಬಳ್ಳಾರಿ*
*ಮಿಸ್ ಯೂನಿವರ್ಸ್ ಆಯ್ಕೆ ಮಾಡಿದ ಹಾಗೆ ಮಂತ್ರಿಗಳನ್ನು ಆಯ್ಕೆ ಮಾಡಿದರೆ?*
ಕ್ಯಾಟ್‌ವಾಕ್ ಬದಲು ಮಂಕಿ ಹಾಪ್, ಫ್ರಾಗ್ ಜಂಪ್, ಎಲಿಫೆಂಟ್ ವಾಕ್ ಗಳು ಇರಬೇಕಾಗುತ್ತದೆ!

*ಎಚ್.ಆನಂದಕುಮಾರ್, ಚಿತ್ರದುರ್ಗ*
*ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಕೊನೆಯಿಲ್ಲ ಎನ್ನುವರಲ್ಲಾ, ಇದರ ತಾರ್ಕಿಕ ಅರ್ಥ ತಿಳಿಸುವಿರಾ?*
ಕೋರ್ಟ್ ಕೇಸ್‌ಗಳಿಗೆ ಇತ್ಯರ್ಥವೆಂಬುದಿಲ್ಲ ಎಂದು!

*ಎಂ.ಬಿ.ಶೋದಾನಪುರ, ಸವದತ್ತಿ*
*ಪ್ರೇಮಿಸಿ ಮದುವೆಯಾದ ಗಂಡ, ಹಿರಿಯರು ಮಾಡಿದ ಗಂಡ; ಇವರಲ್ಲಿ ಯಾರು ಹಿತವರು?*
ಯಾರ ತವರು ಚೆನ್ನವೋ ಅವರು!

*ಮಾಲತಿರಾಜು, ಬೆಂಗಳೂರು*
*ಅಂತರ್ಜಾತೀಯ ವಿವಾಹವಾಗುವವರಿಗೆ ಹುಟ್ಟುವ ಮಕ್ಕಳ ಜಾತಿ ಯಾವುದು?*



ಸಂದೇಹವೇ ಬೇಡ; ಮನುಷ್ಯಜಾತಿ!

*ಹಾಡ್ಯ ಜಯಾನಂದ, ಮೈಸೂರು*
*ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ನಂಬಾಡಿ ಕಟ್ಟೆ ಕಟ್ಟಲು ತಮ್ಮ ಒಡವೆಗಳನ್ನೇ ಮಾರಿದರಂತೆ; ಈಗಿನ ಮುಖಂಡರು?*
ಅವರಿಗಿಂತಲೂ ಶ್ರೇಷ್ಠರು; ಹೊಟ್ಟೆಯೆಂಬ ಕನ್ನಂಬಾಡಿ ಕಟ್ಟೆಗಾಗಿ ನಾಚಿಕೆ, ಮಾನ, ಮರ್ಯಾದೆಗಳನ್ನೇ ಹರಾಜು ಹಾಕಿಕೊಳ್ಳುತ್ತಾರೆ.

*ಎಚ್.ಆರ್.ದೇಸಾಯಿ, ರಾಯಚೂರು*
*ದೇಶ ರಾಜಕಾರಣಿಯ ಕೈಯಲ್ಲಿ, ಜಗತ್ತು ಭಯೋತ್ಪಾದಕರ ಕೈಯಲ್ಲಿ. ನಮ್ಮ-ನಿಮ್ಮ ಕೈಯಲ್ಲಿ?*
ಟಿವಿ ರಿಮೋಟ್!

*ರಾಜೀವಕುಮಾರ ಬಿ. ಪೂಜಾರ, ಮಾಗಳ*
*ಮುತ್ತಿನ ಮತ್ತೇ ಗಮ್ಮತ್ತು; ಇದಕ್ಕೆ ನಿಮ್ಮ ಮಾತು?*
ತಾತ ಮೊಮ್ಮಗನಿಗೆ ನೀಡುವುದೋ, ನಲ್ಲ ನಲ್ಲೆಗೆ ನೀಡುವುದೋ, ಸಮುದ್ರದಾಳದ್ದೋ; ಯಾವ ಮುತ್ತು?

*ಜಾಕೋಬ್ ಡಿಸೋಜ, ಕುರುವಳ್ಳಿ*
*ಬುದ್ಧಿವಂತರಿಗೆ ಬರಗಾಲವಿಲ್ಲವಂತೆ ಹೌದೆ?*
ನಿಜ. ಆರ್ಥಿಕ ಹಿಂಜರಿತವಾದಾಗಲೂ ಹಿಂಜರಿತ ಎದುರಿಸುವುದು ಹೇಗೆ? ಎಂದು ಪುಸ್ತಕ ಬರೆದು ದುಡ್ಡು ಗಳಿಸಿದವರಿದ್ದಾರೆ

*ಶ್ರೀಧರ್ ಕಂಠನಹಳ್ಳಿ, ಬೆಂಗಳೂರು*
*ಆಸ್ತಿ-ಗೀಸ್ತಿ, ತೊಂದರೆ-ಗಿಂದರೆ ಪದಗಳಲ್ಲಿ ಎರಡನೆಯದಕ್ಕೆ ಅರ್ಥ ಕೇಳಿದರೆ ಏನು ಹೇಳಬೇಕು?*
ಜೋಡಿಯಲ್ಲಿ ಮೊದಲನೆಯದು ಹೆಣ್ಣು, ಇನ್ನೊಂದು ಗಂಡು. ಗಂಡಿಗೆ ಅರ್ಥವಿರುವುದಿಲ್ಲವೆಂದು ಹೇಳಿ. ಪಡೆನುಡಿ ಕನ್ನಡದ ವೈಶಿಷ್ಟ್ಯ.

*ಸವಿರವಿ, ಬಾಳೆಹೊನ್ನೂರು*
*ಹಳೆಯ ದಿನಪತ್ರಿಕೆಯಲ್ಲೂ ಸುದ್ದಿ ಇದ್ದರೂ, ಆ ದಿನದ ಪತ್ರಿಕೆಯೇ ಬೇಕೆನ್ನುವುದೇಕೆ?*
ಹಿಂದಿನ ಪತ್ರಿಕೆ ವೃದ್ಧೆ; ಅಂದಿನ ಪತ್ರಿಕೆ ತರುಣಿ!

*ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ*
*ಉದರಕ್ಕೂ ವೈರಾಗ್ಯವುಂಟೆ ರಾಮ್‌ಜಿ?*
ದರ ಬೆಳೆದು, ಆಹಾರ ಉದಾರವಾಗಿ ದೊರೆಯದಿದ್ದರೆ ಉದರ ವೈರಾಗ್ಯ ತಾಳಲೇಬೇಕಲ್ಲ!

*ಗೊಡ್ವಿನ್ ಕುಬೆಲ್ಲೊ, ಬೆಂಗಳೂರು*
*ಕಂಪ್ಯೂಟರ್‌ಗೆ ಶಟ್ ಡೌನ್, ನಮಗೆ ಶಟ್ ಅಪ್; ನಿಮ್ಮ ವಿಚಾರ?*
ಸರಿಯಾದರೆ ಸೆಟ್ ಅಪ್, ಇಲ್ಲವಾದರೆ ಅಪ್‌ಸೆಟ್!

*ನಂ.ಶ್ರೀಕಂಠಕುಮಾರ್, ಶ್ರೀರಾಂಪುರ*
*ಬ್ಯೂಟಿ ಪಾರ್ಲರ್‌ಗೂ, ಮೆನ್ಸ್ ಸೆಲೂನ್‌ಗೂ ಇರುವ ವ್ಯತ್ಯಾಸವೇನು?*
ಬ್ಯೂಟಿ ಪಾರ್ಲರ್‌ನಿಂದ ಹೊರಬರುವವರಿಗೆ ತಾವು ಸುಂದರಿಯರೆಂಬ ಭ್ರಮೆ ಇರುತ್ತದೆ!

## ಬಹುಮಾನಿತ ಪ್ರಶ್ನೆ

*ಪಿ.ಎಸ್.ಶ್ರೀವತ್ಸ, ಜೆ.ಪಿ.ನಗರ, ಬೆಂಗಳೂರು*
*ನೆರೆಮನೆಯಲ್ಲಿದ್ದರೂ ಹಬ್ಬಗಳಂದು ಆರತಿಗೂ ಫೋನಿನಲ್ಲೇ ಕರೆಯುವುದು ಹೆಚ್ಚಾಗಿದೆಯಲ್ಲಾ?*
ಮನೆಗೆ ಹೋಗಿ ಕರೆಯುವ ಸಮಯದಲ್ಲಿ ಸೀರಿಯಲ್ ಮಿಸ್ ಆಗಿಬಿಡುವುದೆಂಬ ಆತಂಕ!

*ಕೆ.ಎಸ್.ನಾರಾಯಣರೆಡ್ಡಿ, ಕೆ.ಜಿ.ಎಫ್.*
*ಚತುರ್ವರ್ಣಗಳಲ್ಲಿ ನಮ್ಮ ರಾಜಕಾರಣಿಗಳು ಯಾವ ವರ್ಗಕ್ಕೆ ಸೇರುತ್ತಾರೆ?*
ಯಾವುದಕ್ಕೂ ಅಲ್ಲ. ಧೂಮಕೇತುಗಳಿಗೆ ವರ್ಗಗಳಿರುವುದಿಲ್ಲ.

*ಡಿ.ಆರ್.ಮಂಜುನಾಥ, ದೇಬೂರು*
*ಲಂಚ ಕೊಡದೆ ಸುಲಭವಾಗಿ ಆಗುವ ಕೆಲಸ ಯಾವುದಾದರೂ ಇದೆಯಾ?*



ಈ ಅಂಕಣದಲ್ಲಿ ಉತ್ತರ ಪಡೆಯುವುದು!

*ಮಾಲತಿ, ಬೆಂಗಳೂರು*
*ಅಸೂಯೆ, ಮತ್ಸರ ಪುರುಷರಲ್ಲಿ ಹೆಚ್ಚೋ, ಮಹಿಳೆಯರಲ್ಲಿ ಹೆಚ್ಚೋ?*
ಇವೆರಡೂ ಲಿಂಗಾತೀತ, ಜಾತ್ಯತೀತ; ಎಲ್ಲಿ ಅತೃಪ್ತಿ, ಬಲಹೀನತೆ ಇರುವುದೋ ಅಲ್ಲೇ ಇವುಗಳ ಸಾಮ್ರಾಜ್ಯ!

*ಮಲ್ಲಿಕಾರ್ಜುನ ಬಗಲಿ, ಸಾಂಗಲಿ*
*ಅನ್ಯರನ್ನು ವರಿಸಿದ ಪ್ರಿಯತಮೆಗೆ ಸೌ ಸಾಲ್ ಪೆಹಲೆ ಮುಝೆ ತುಂಸೆ ಪ್ಯಾರ್ ಥಾ... ಕಲ್ ಭೀ ರಹೇಗಾ ಎನ್ನುವವನ ಪ್ರೀತಿಗೆ ಏನೆನ್ನಬೇಕು?*
ತೇರಾ ಮೇರಾ ಪೀಛೇ, ಛೂಟಾ ರಾಹೀ, ಚಲ್ ಅಕೇಲಾ ಎನ್ನಬೇಕು.

*ಡಿ.ಎಲ್.ನಾಗರಾಜ್, ಹರಪನಹಳ್ಳಿ*
*ಪ್ರತಿಯೊಬ್ಬರೂ ಜಗ ಬದಲಾಗಬೇಕೆನ್ನುವರೇ ಹೊರತು ತಾವು ಬದಲಾಗಬೇಕೆನ್ನರಲ್ಲಾ?*
ಆಕಾಂಕ್ಷೆ ಅನುಷ್ಠಾನಕ್ಕಿಂತಲೂ ಸುಲಭ ಆಯ್ಕೆ!

■ ರಾಮ್